**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.672/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ ನಂ.1ಃ ಶರಣಗೌಡ ತಂದೆ ಭೀಮರೆಡ್ಡಿ ಪೋಲೀಸ ಪಾಟೀಲ್
ವಃ 45 ವರ್ಷ, ಉಃ ಒಕ್ಕಲುತನ
ಸಾಃ ಬಟಗೆರಾ (ಬಿ) ಗ್ರಾಮ, ತಾಃ ಸೇಡಂ

2. ಹಾಜಪ್ಪಾ ತಂದೆ ಶರಣಪ್ಪಾ ಕಬ್ಬಲಿಗೆರ
ವಃ 35 ವರ್ಷ, ಉಃ –
ಸಾಃ ಬಟಗೇರಾ (ಬಿ ) ಗ್ರಾಮ, ತಾಃ ಸೇಡಂ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ.,ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 12-08-2019 ರಂದು ಸಾಯಂಕಾಲ 06.00 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಬಟಗೆರಾ (ಬಿ ) ಗ್ರಾಮದ ಹತ್ತಿರ ಇರುವ ಪಿರ್ಯಾದಿ ಹೊಲ ಸರ್ವೆ ನಂ.18/4 ರಲ್ಲಿ ಒಟ್ಟು 1 ಎಕರೆ 38 ಗುಂಟೆ ಹೊಲವಿದ್ದು ಸದರಿ ಹೊಲದಲ್ಲಿ ಚಾಸಾ 1 ನೇದ್ದವರು ಈಗ ಸುಮಾರು 15 ದಿವಸಗಳ ಹಿಂದೆ ತೊಗರಿ ಬೆಳೆ ಬಿತ್ತನೆ ಮಾಡಿದ್ದು ಹೊಲದಲ್ಲಿ ತೊಗರಿ ಮೊಳಕೆ ನಾಟಿ ಸ್ವಲ್ಪ ದೊಡ್ಡದ್ದಾಗಿದ್ದು ಇರುತ್ತದೆ ಆರೋಪಿ 1 ನೆದ್ದವನು ಈ ಹೊಲವು ನನ್ನ ಹೊಲದ ಪಕ್ಕದಲ್ಲಿದ್ದು ಇದು ನಮ್ಮ ಹೊಲ ಇರುತ್ತದೆ ಅಂತಾ ಹೇಳಿ ತನ್ನ ಜೊತೆಯಲ್ಲಿ ಆರೋಪಿ 2 ನೆದ್ದವನಿಗೆ ಕರೆದುಕೊಂಡು ಅಕ್ರಮವಾಗಿ ಚಾಸಾ 1 ನೆದ್ದವರ ಹೊಲ ಸರ್ವೆ ನಂ 18/4, 1 ಎಕರೆ 38 ಗುಂಟೆ ಹೊಲದಲ್ಲಿ ಅತೀಕ್ರಮ ಪ್ರವೇಶ ಮಾಡಿದ್ದು , ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 447 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಅಕ್ರಮವಾಗಿ ಚಾಸಾ1 ನೇದ್ದವರ ಹೊಲ ಸರ್ವೆ ನಂ 18/4, 1 ಎಕರೆ 38 ಗುಂಟೆ ಹೊಲದಲ್ಲಿ ಹೋಗಿ ಹೊಲದಲ್ಲಿ ಬಿತ್ತನೆ ಮಾಡಿದ ತೊಗರಿ ಬೆಳೆಯನ್ನು ಕುಂಟಿ (ಎತ್ತಿನ ಗಳ್ಯಾ)ಹೊಡೆದು ಹೊಲದಲ್ಲಿದ್ದ ಸಂಪೂರ್ಣ ತೊಗರಿ ಬೆಳೆ ನಾಷ ಪಡಿಸಿ ಸುಮಾರು 46,875/- ರೂ. ನಷ್ಟ ಮಾಡಿದ್ದು ಇರುತ್ತದೆ, ಆ ಮೂಲಕ ಭಾ.ದಂ.ಸಂ. ಕಲಂ 427 ಸಂಗಡ

34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 06-03-2025

ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.672/2019**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂಃ 1 ಶರಣಗೌಡ ತಂದೆ ಭೀಮರೆಡ್ಡಿ ಪೋಲೀಸ ಪಾಟೀಲ್
ವಃ 45 ವರ್ಷ, ಉಃ ಒಕ್ಕಲುತನ
ಸಾಃ ಬಟಗೆರಾ (ಬಿ) ಗ್ರಾಮ, ತಾಃ ಸೇಡಂ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 06-03-2025 ಪ್ರ.ದ.ನ್ಯಾದಂ. ಸೇಡಂ.